ಪ್ರತಿಬಿಂಬ

**PRATIBIMBA –Multidisciplinary Kannada Research Journal of IIMRD**
**ISSN: 2582-2284**
**Vol-4 Issue 3, Nov-Dec, 2022, Pp. 77-85.**
**©*IIMRD*, Mysuru.**

IIMRD JOURNALS

**www.iimrd.com**

# ಆಯ್ದಕ್ಕಿ ಮಾರಯ್ಯ ಮತ್ತು ಲಕ್ಕಮ್ಮ ದಂಪತಿಯ ವಚನಗಳಲ್ಲಿ ಕಾಯಕ ಮತ್ತು ಆಧ್ಯಾತ್ಮಿಕತೆ

**ಚಿದಾನಂದ. ಕೆ. ಡಿ.**

*ಸಂಶೋಧಕರು, ಕಳಸಾಪುರ ಅಂಚೆ, ಲಕ್ಯಾ ಹೋಬಳಿ, ಚಿಕ್ಕಮಗಳೂರು ಜಿಲ್ಲೆ ಮತ್ತು ತಾಲ್ಲೂಕು.

***ಸಾರಾಂಶ: (Abstract)***

*ಕನ್ನಡ ಸಾಹಿತ್ಯದ ಸಾರಸ್ವತ ಲೋಕದಲ್ಲೇ ವಚನಕಾರರು, ದಾಸರು ಧ್ರುವತಾರೆಗಳಂತೆ ಹೊಳೆದವರು, ಇವರ ಸಾಲಿನಲ್ಲಿ ಮೊದಲಿಗರು ವಚನ ಸಾಹಿತ್ಯದ ಹರಿಕಾರರು, ವಚನ ಸಾಹಿತ್ಯ ಎಂದೊಡನೆ ನಮ್ಮ ಎದುರಿಗೆ ತಕ್ಷಣವೇ ಬಂದು ನಿಲ್ಲುವ ಮೂರ್ತಿಗಳು ಬಸವಣ್ಣ, ಅಲ್ಲಮಪ್ರಭು ಮೊದಲಾದವರು. ಈ ಭವಸಂಸಾರದಲ್ಲಿ ಅನಾನೂಭವಿಗಳನ್ನು ಅನುಭವಿಗಳನ್ನಾಗಿ, ಅನುಭವಿಗಳನ್ನು ಅನುಭಾವಿಗಳನ್ನಾಗಿ ನಿರಂತರವಾಗಿ ಬದಲಾವಣೆ ಮಾಡುವ ಪ್ರಯತ್ನ ಮಾಡಿದವರು ವಚನಕಾರರು. ಪ್ರಸ್ತುತ ಲೇಖನದಲ್ಲಿ ಆಯ್ದಕ್ಕಿ ಮಾರಯ್ಯ ಮತ್ತು ಲಕ್ಕಮ್ಮ ದಂಪತಿಯ ವಚನಗಳ ಸಾರವನ್ನು ವಿಶ್ಲೇಷಿಸಲಾಗಿದೆ.*

***ಮುಖ್ಯಪದಗಳು: (Keywords)*** *ಆಯ್ದಕ್ಕಿ ಮಾರಯ್ಯ, ಲಕ್ಕಮ್ಮ, ವಚನಗಳು, ಕಾಯಕ, ಆಧ್ಯಾತ್ಮ.*

**ಪೀಠಿಕೆ**

ಸ್ವಾನುಭವ ಸಾಧನೆಯ ಮೂಲಕ ವಿಶ್ವಾತೀತ ಶಕ್ತಿಯ ರಹಸ್ಯವನ್ನು ಅರಿಯುವುದು ಹಾಗೂ ಪರಾಶಕ್ತಿಯೊಡನೆ ಸಮರಸಗೊಳ್ಳಬೇಕೆಂಬುದೇ ಶರಣರ ಜೀವನದ ಪರಮಗುರಿ. ಈ ದಿಸೆಯಲ್ಲಿ ವಚನಕಾರರು ನಿರಂತರವಾಗಿ ಆಂತರಿಕ ಭಕ್ತಿ ಯುದ್ಧದಲ್ಲಿ ತೊಡಗಿದ್ದರು. ಸರ್ವಾಂಗ ಕಲಿಗಳಾಗಿ, ಛಲದಂಕಮಲ್ಲರಾಗಿ, ಆಧ್ಯಾತ್ಮ ಸಾಧನೆಯ ಮಾರ್ಗದಲ್ಲಿ ಎದುರಾದ ಅನೇಕ ಸಮಸ್ಯೆಗಳನ್ನು ವೈಯಕ್ತಿಕವಾದ ಹಾಗೂ ಸಾಮಾಜಿಕ ಸಿದ್ಧಿಯತ್ತ ಸತತವಾಗಿ ಪ್ರಯೋಗಿಸಿದ್ದಾರೆ. 'ಕೊಲುವೆನೆಂಬ ದೇವನೊಂದಿಗೆ, ಗೆಲುವೆನೆಂಬ ಛಲದಿಂದ ಹೋರಾಡಿದ ವೀರಯೋಧರು", ಈ ಶರಣ ವಚನಕಾರರು ಇಂತಹ ಕಠಿಣತರನಾದ ಸಾಧನೆಯ ಸುದೀರ್ಘ ಮಾರ್ಗದಲ್ಲಿ ತಮಗಾದ ಆಸೆ, ಅನುಭವ, ಅನಿಸಿಕೆಗಳಿಗೆ ಆಡುನುಡಿಯಲ್ಲಿ ಅಭಿವ್ಯಕ್ತಿಸಿದ್ದಾರೆ.

ಅಂತೆಯೇ ಶರಣರ ಸಾಹಿತ್ಯ, ಆಧ್ಯಾತ್ಮಕ ಅತೀಂದ್ರಿಯ ಹಾಗೂ ಸಮಾಜ ಜೀವನದ ವಾಸ್ತವದ ಅನುಭವವನ್ನು ಅಳವಡಿಸಿಕೊಂಡು, ಪೂರ್ಣ ಜೀವನದ ಸ್ವಾನುಭವದ ಅಭಿವ್ಯಕ್ತಿಯಾಗಿದೆ. ನೆಲ ಮುಗಿಲುಗಳೆರಡನ್ನು ವ್ಯಾಪಿಸಿಕೊಂಡು ವಿಶ್ವ ವೈಶಾಲ್ಯತೆ ಪಡೆದುಕೊಂಡಿದೆ. ಶರಣರ ಅಪಾರ ಲೋಕಾನುಭವ

*Please cite this article as: ಚಿದಾನಂದ. ಕೆ. ಡಿ.* (2022). ಆಯ್ದಕ್ಕಿ ಮಾರಯ್ಯ ಮತ್ತು ಲಕ್ಕಮ್ಮ ದಂಪತಿಯ ವಚನಗಳಲ್ಲಿ ಕಾಯಕ ಮತ್ತು ಆಧ್ಯಾತ್ಮಿಕತೆ. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 4(3). ಪು.ಸಂ. 77–85.*

ಬದುಕಿನ ಚಿರಂತನ ಮೌಲ್ಯಗಳ ಅನ್ವೇಷಣೆ ಪರಿಪೂರ್ಣ ಜೀವನ ದರ್ಶನದಿಂದ ವಚನ ಸಾಹಿತ್ಯ ಮೌಲಿಕವಾಗಿದೆ. ಆಡುಭಾಷೆಯಲ್ಲಿ ನಮ್ಮ ಮನಸ್ಸನ್ನು ತಟ್ಟಿ ನಮ್ಮಂಥ ಭವಿಗಳನ್ನು ಅನುಭವ, ಅನುಭಾವವನ್ನು ತುಂಬಲು ಪರಿಶ್ರಮಿಸಿದರು.

ಕನ್ನಡದ ವಿಶಿಷ್ಟ ರೂಪವಾದ, ಬಸವಣ್ಣನವರಿಗಿಂತ ತುಸು ಮುಂಚಿತವಾಗಿ ಪ್ರಾರಂಭವಾದ ವಚನ ರಚನೆ ಬಸವಣ್ಣ ಹಾಗೂ ಅವರ ಸಮಕಾಲೀನ ಅಭಿವ್ಯಕ್ತಿಯ ಮಾಧ್ಯಮವಾಯಿತು. ಅದರಿಂದಾಗಿ ವಚನ ಸಾಹಿತ್ಯಕ್ಕೆ ಆಳವಿಸ್ತಾರಗಳು ದೊರಕಿದವು. ವಚನ ಸಾಹಿತ್ಯ ಕನ್ನಡ ಸಾಹಿತ್ಯದ ಒಂದು ಅನನ್ಯವಾದ ಪ್ರಕಾರವಾಗಿದ್ದರೂ ಅದನ್ನು ಸೃಷ್ಟಿಸಿದವರು ಕೇವಲ ಸಾಹಿತಿಗಳಾಗರಿಲಿಲ್ಲ ಅವರೆಲ್ಲಾ ಸತ್ಯಾನ್ವೇಷಿಗಳಾಗಿದ್ದರು ಆಧ್ಯಾತ್ಮ ಸಾಧಕರಾಗಿದ್ದರು. ಭೌತಿಕ ಹಂತದ ಕ್ರಿಯೆ ಆಂತರಿಕ ಚಿಂತನೆಯ ಒಡನೊಡನೆಯೆ ನೆರವೇರುವ ಬಗೆಯನ್ನು ಚೆನ್ನಬಸವಣ್ಣ ಒಂದು ವಚನದಲ್ಲಿ ವಿವರಿಸುತ್ತಾನೆ. 'ಕಾಯ ಕಾಯಕವ ಮಾಡುತ್ತಿರಲು ಮನವು ಲಿಂಗದಲ್ಲಿ ಬೆರೆಸಿ ತೆರದಿಲ್ಲದಿಪ್ಪ ಮಡಿವಾಳ ಪರಿಯನೋಡ'. ಕಾಯ ಭೌತಿಕ ಕ್ರಿಯೆಯಲ್ಲಿ ನಿರತವಾಗಿದ್ದು ಭಕ್ತನ ಚಿತ್ತ ದೈವಾನು ಸಂಧಾನದಲ್ಲಿ ಅಥವಾ ಆತ್ಮಚಿಂತನೆಯಲ್ಲಿ ತೊಡಗಿದಾಗ ಕಾಯಕದಲ್ಲಿ ಏಕಾಗ್ರತೆ ಸಹಜವಾಗಿ ಸಾಧಿಸುತ್ತದೆ, ಪರಿಶುದ್ಧವಾಗುತ್ತದೆ. ಇಂಥ ಪರಿಶುದ್ಧ ಚಿತ್ತೈಕಾಗ್ರತೆಯಿಂದ ಮಾಡುವ ಕಾಯಕ ಲಿಂಗ ಪೂಜೆಯೂ ನಿಜ, ಜಂಗಮ ಪೂಜೆಯೂ ನಿಜ.

ಆಯ್ದಕ್ಕಿ ಮಾರಯ್ಯ ಮತ್ತು ಲಕ್ಕಮ್ಮನ ಕಾಲ ಸುಮಾರು ಕ್ರಿ.ಶ.1160. ಇವರು ಮೂಲತಃ **'ರಾಯಚೂರು ಜಿಲ್ಲೆಯ' 'ಅಮರೇಶ್ವರದವರು'** ಆಯ್ದಕ್ಕಿ ಮಾರಯ್ಯ ಕಾಲನಂತರ ಲಕ್ಕಮ್ಮನೊಡನೆ ತಾನು ಕಲ್ಯಾಣಕ್ಕೆ ಬಂದು ಅಲ್ಲಿನ ಅಂಗಡಿ ಬೀದಿಗಳಲ್ಲಿಯು, ಮನೆಯ ಅಂಗಳದಲ್ಲಿಯು ಚೆಲ್ಲಿದ್ದ ಅಕ್ಕಿಯನ್ನು ಆಯ್ದುತಂದು, ಜಂಗಮಕ್ಕೆ ನೀಡಿ ತಾವು ಸೇವಿಸುತ್ತಿದ್ದರು. ಆಯ್ದಕ್ಕಿ ಮಾರಯ್ಯ ಮತ್ತು ಲಕ್ಕಮ್ಮ ದಂಪತಿಯ ವಚನಗಳಲ್ಲಿ ಕಾಯಕ ಮತ್ತು ಆಧ್ಯಾತ್ಮಿಕತೆ ಮಹತ್ವಪೂರ್ಣದ್ದಾಗಿದೆ. ಆದುದರಿಂದ,

***"ಕಾಯಕದಲ್ಲಿ ನಿರತನಾದರೆ, ಗುರುದರುಶನವಾದರೂ ಮರೆಯಬೇಕು***
***ಲಿಂಗಪೂಜೆಯಾದರೂ ಮರೆಯಬೇಕು;***
***ಜಂಗಮ ಮುಂದಿದ್ದಡೆಯೂ ಹಂಗು ಹರಿಯಬೇಕು***
***ಕಾಯಕವೇ ಕೈಲಾಸವಾದ ಕಾರಣ***
***ಅಮರೇಶ್ವರ ಲಿಂಗವಾಯಿತ್ತಾದರೂ ಕಾಯಕದೊಳಗು"***[1]

ಕಾಯಕದಲ್ಲಿ ನಿರತನಾದಾಗ ಅದನ್ನು ಮನಮುಟ್ಟಿ ಮನಮೆಚ್ಚಿ ಮಾಡದೇ ಗುರುಬಂದಿದ್ದಾನೆ, ಜಂಗಮ ಬಂದಿದ್ದಾನೆ ಲಿಂಗಪೂಜೆ ಮಾಡಬೇಕು ಎಂದು ಕುಂಟು ನೆಪ ಹೇಳಿ ಕಾಯಕದಿಂದ ಜಾರಿಕೊಳ್ಳುವುದು ಕಾಯಕಕ್ಕೆ ವಂಚನೆ ಮಾಡಿದಂತೆ. ಸತ್ಯ ಶುದ್ಧ ಕಾಯಕದಲ್ಲಿ ಚಿತ್ತ ವಿಚ್ಚಂದವಾಗಿರಬೇಕು.

***"ನೇಮವ ಮಾಡಿಕೊಂಡು ಭಕ್ತರ ಭವನಂಗಳಾ ಹೊಕ್ಕು***
***ಕಾಯಕ ಸತ್ತು ಹಣ ಹೊನ್ನ ಬೇಡಿಹೆನೆಂಬುದು ಕಷ್ಟ***

[1] ಗುಮ್ಮಳಾಪುರದ ಸಿದ್ದಲಿಂಗದೇವರ ಶೂನ್ಯಸಂಪಾದನೆ ಸಂ.ಆರ್.ಸಿ.ಹಿರೇಮಠ ವಚನ 838, ಪು.344

***ಸದ್ಭಕ್ತರಿಗೆ ಅವಗುಣ ಅಮರೇಶ್ವರ ಲಿಂಗಕ್ಕೆ ದೂರ'***[2]

ಶಿವಶರಣರು ಸಮಾಜದಲ್ಲಿ ನಡೆಯುವ ಭ್ರಷ್ಟಾಚಾರ ಡಾಂಭಿಕತನ, ಮೂಢತನವನ್ನು ನಯವಾದ ಭಾಷೆಯ ಮೂಲಕ ಕಟುವಾಗಿ ಟೀಕಿಸಿದ್ದು ಉಂಟು. 'ನೇಮ' ಮೂಲತಃ ನಾನ ಅರ್ಥವನ್ನು ಹೊಂದಿದ್ದರು ಮಾರಯ್ಯ ಇಲ್ಲಿ 'ನಿಯಮ, ವ್ರತ'ಎಂಬ ಅರ್ಥದಲ್ಲಿ ಬಳಸಿದ್ದಾನೆ. ಭಕ್ತರ ಭುವನದ ಅಂಗಳವೇ ಅವನ ಮನಸ್ಸಿನ ಅಂಗಳವಾಗಿದೆ. ಇಂತಹ ಅಂಗಳಕ್ಕೆ ಹಣ, ಹೊನ್ನು ಸೇರಿದರೆ ಕಾಯಕದಲ್ಲಿ ನಿರತನಾದವನು ಸಹ ಕಾಯಕವನ್ನು ಮರೆಯುವುದು ಸಹಜ. ಹೀಗೆ ಈ ಎಲ್ಲಾ ಢಾಂಬಿಕತನ ಸದ್ಭಕ್ತನ ಗುಣಗಳಲ್ಲ ಇವುಗಳು ಶಿವಶರಣರ ಚಿತ್ತದಲ್ಲಿ ಸುಳಿಯ ಕೂಡದೂ ಕಾಯಕ ನಿಲ್ಲಬಾರದು. ಅದು ನಿರಂತರ ಪ್ರಕ್ರಿಯೆಯಾಗಿ ಚಲನಶೀಲವಾಗಿರಬೇಕು ಎಂಬ ತಾತ್ವಿಕತೆಯನ್ನು ಒತ್ತಿ ಹೇಳಿದ್ದಾರೆ.

***"ಗುರು, ಲಿಂಗ, ಜಂಗಮದಲ್ಲಿ ಬೆರಸಿ ದಾಸೋಹ ಮಾಡುವಲ್ಲಿ***

***ಹೊನ್ನು, ಹೆಣ್ಣು, ಮಣ್ಣು ಇವೇ ಮೂಲ ಮೊದಲು***

***ಮಾಟ ಸ್ವಸ್ಥವಾದಲ್ಲಿ ಈ ಮೂರ ಮರೆಯಬೇಕು,***

***ಅಮರೇಶ್ವರಲಿಂಗವರಿಯಬೇಕು"***[3]

ತ್ರಿವಿಧ ದಾಸೋಹಕ್ಕೆ ಅಗತ್ಯವಾದುದೆಂದು ಕಾಯಕವನ್ನು ಯೋಚಿಸಿದ ಶರಣರು ಅದರ ವ್ರತ ಸ್ವರೂಪವನ್ನಿತ್ತರು. ಅವರು ಬೋಧಿಸಿದ ಧರ್ಮದಲ್ಲಿ ತ್ರಿವಿಧ ದಾಸೋಹ ಒಂದು ಮುಖ್ಯವಾದ ಸಾಧನ. ಆತ್ಮೋದ್ಧಾರಕ್ಕೆ ದಾಸೋಹದಷ್ಟು ಸುನಿಶ್ಚಿತವಾದ ಮಾರ್ಗ ಬೇರಾವುದು ಇಲ್ಲವೆಂಬುದು ಅವರ ಅಚಲವಾದ ನಿಷ್ಠೆ. ಕಾಯಕದ ಮೂಲಕವಾಗಿ ನಡೆಯುವ ದಾಸೋಹದಲ್ಲಿ ಮೇಲು ನೋಟಕ್ಕೆ ಬಾಹ್ಯಕ್ರಿಯೇ ಕಾಣುವುದಾದರೂ ಶರಣ ಮಾರ್ಗದ ದಾಸೋಹದ ಭಾವದ ಒಳವು ದ್ವೈತ ಸ್ಥಿತಿಯಲ್ಲಿಯೇ ಉಳಿಯುವಂತಹುದಲ್ಲ.

ದ್ವೈತದಿಂದ ಆರಂಭಗೊಂಡು ಅದ್ವೈತ ಸ್ಥಿತಿಗೇರುವಂತಹುದು ಮೊದಲು ತನ್ನಿಂದ ಭಿನ್ನವೆಂಬ ಭಾವದಲ್ಲಿ 'ಗುರು–ಲಿಂಗ–ಜಂಗಮಾರ್ಚನೆ' ಪ್ರಾರಂಭವಾಗಿ ಕೊನೆಯಲ್ಲಿ ಈ ಮೂರನ್ನು ತನ್ನಲ್ಲಿಯೇ ಕಂಡು ಉಪಾಸಿಸುವ ಸಹಜ ಸ್ಥಿತಿಯದ್ದಾಗಿದೆ. ಆಯ್ದಕ್ಕಿ ಮಾರಯ್ಯ ಈ ರೀತಿಯ ದಾಸೋಹ ಪ್ರಕ್ರಿಯೆಯಲ್ಲಿ 'ಹೆಣ್ಣು–ಹೊನ್ನು–ಮಣ್ಣು ' ಈ ಮೂರು ಮಾಟ ಸ್ವರೂಪದಾಗಿವೆ. ಇದರಿಂದ ಕಾಯಕದಲ್ಲಿ ಮತ್ತು ದಾಸೋಹದಲ್ಲಿ ನಿರತನಾದ ಶರಣನು ಇವುಗಳನ್ನು ಮರೆತು ತನ್ನ ಕಾರ್ಯದಲ್ಲಿ ಲೀನನಾಗುವ ಮೂಲಕ ಅಮರೇಶ್ವರ ಲಿಂಗವನ್ನು ಅರಿಯಬೇಕೆಂದು ಪರಿಭಾವಿಸಿದ್ದಾನೆ. ಹಸಿವಾದಾಗ ಉಣಬೇಕು, ಅದಕ್ಕಾಗಿ ದುಡಿಮೆ ಮಾಡಬೇಕು ಶ್ರಮವಿಲ್ಲದೇ ಯಾವುದು ಅನಾಯಾಸವಾಗಿ ಬರಬಾರದು. ಬೇರೆಯ ವಸ್ತು ವಿಭೂತಿಗೆ ಆಸೆ ಪಡಬಾರದು. ಅದಕ್ಕೆಂದೇ ಆಯ್ದಕ್ಕಿ ಲಕ್ಕಮ್ಮ ಈ ವಚನ ಕಟ್ಟಿದ್ದಾಳೆ:

***"ಕೈದು ಕೊಡುವರಲ್ಲದೆ ಕಲಿತನವ ಕೊಡುವರುಂಟೆ ಮಾರಯ್ಯ***

---

[2] ಅದೇ, ವಚನ 840, ಪು. 344.

[3] ಅದೇ, ವಚನ 840, ಪು. 344.

***ಹೆಣ್ಣ ಕೊಡುವರಲ್ಲದೆ ಕೂಟಕ್ಕೊಳಗಾದವರುಂಟೆ ಮಾರಯ್ಯ***

***ಕಳುವ ಚೋರಂಗೆ ಬಡವರೆಂದು ದಯವುಂಟೆ ಮಾರಯ್ಯ***

***ಮನವ ನೊರೆದು ಭಕ್ತಿಯ ನೋಡಿಹನೆಂಬುವಂಗೆ***

***ಎಮ್ಮಲ್ಲಿ ಗುಣವ ಸಂಪಾದಿಸಲಿಲ್ಲ ಮಾರಯ್ಯ***

***ಶೂಲವನೇರಿ ಸಂದಲ್ಲಿ ಮತ್ತಿನ್ನ ಸಾವಿಂಗೆ ಹಂಗುಪಡಲೇಕೆ?***

***ಮಾರಯ್ಯ ಪ್ರಿಯ ಅಮರೇಶ್ವರಲಿಂಗಾ ನಿನೇಬಲ್ಲೆ''***[4]

ದುಡಿಯುವ ಸಾಮರ್ಥ್ಯ ಅದು ವಿನಿಯೋಗವಾಗುವ ಪರಿ ಮುಖ್ಯವೇ ಹೊರತು ಕಳ್ಳ ಸಂಪಾದನೆಗೆ ಅಸ್ಪದವಾಗಿ ಸಮಾಜದಲ್ಲಿ ಕೆಟ್ಟ ಹೆಸರು ಗಳಿಸಬಾರದು. ಅಂತಃಕರಣದಿಂದ ಭಕ್ತಿ ಎಂಬ ಭಾವ ಕಾಯಕದ ಮೂಲಕ ಮನಗಾಣಬೇಕೆ ಹೊರತು, ತೋರಿಕೆ ಕಪಟ ಭಕ್ತಿಯಾಗಬಾರದು. ಕಾಯಕತತ್ತ್ವದ ಮೂಲಕ ಒಳ್ಳೆಯ ಸನ್ನಡತೆಯ ಗುಣಗಳನ್ನು ಸಂಪಾದಿಸಬೇಕು. ಹಾಗಾದರೆ ಮಾತ್ರ ದೈವವು ಒಲಿಯುತ್ತದೆ. ಅಂದಿನ ಸಂದರ್ಭದಲ್ಲಿ ಕಾಯಕ ಮಾಡುವ ಶ್ರದ್ಧೆಯುಳ್ಳವರಿಗೆ ಅನುಭವ ಮಂಟಪದಲ್ಲಿ ಪ್ರವೇಶ ದೊರೆಯುತ್ತಿತ್ತು. ಅಲ್ಲಿ ಮಹಾಶರಣರ ಸತ್ಸಂಗ, ಅನುಭವ ಗೋಷ್ಠಿಗಳು ನಡೆದು ಕಾಯ, ದಾಸೋಹ, ಗುರು, ಲಿಂಗ, ಜಂಗಮರ ಬಗ್ಗೆ ದೀರ್ಘವಾದ ಉಪನ್ಯಾಸಗಳು ನೆರವೇರುತ್ತಿದ್ದವು. ಅಲ್ಲದೇ 'ಕಾಯಕ'ವೆಂಬ ವೃತ್ತಿಗೌರವ ಇರುತ್ತಿತ್ತು. ವೃತ್ತಿಯ ಮೂಲಕ ದೇವರನ್ನು ಕಾಣಬೇಕಿತ್ತು. ''ಕಾಯವೇ ಕೈಲಾಸ'' ವೆಂಬ ಬಸವಣ್ಣನವರ ಸರಳಸೂತ್ರ ಶಿವ ಶರಣರಾದವರಿಗೆಲ್ಲ ಒಂದು ದಿವ್ಯ ಮಂತ್ರವಾಯಿತು. ಅಲ್ಲಿಯೇ ಕಾಯಕ ದಾಸೋಹಗಳಿಂದ ಸರ್ವ ರೀತಿಯ ಆರೋಗ್ಯಕರ ಸಂಪತ್ತನ್ನು ಸುಧಾರಿಸಿಕೊಂಡವರು ವಚನಕಾರರು.

***''ಪೂಜೆಯುಳ್ಳನ್ನಕ್ಕ ಪುಣ್ಯದ ಗೊತ್ತು ಕಾಣಬಂದಿತ್ತು***

***ಮಾನವುಳ್ಳನ್ನಕ್ಕ ಮಹಾಪ್ರಮಥರ ಭಾಷೆ ಭಾಗ್ಯದೊರೆಕೊಂಡಿತ್ತು***

***ಮಾಟವಿಲ್ಲದವನ ಭಕ್ತಿ ಹಾಳೂರ ವಂಶಕ್ಕೆ ಕೋಲ ಹಿಡಿದಂತಾಯಿತು***

***ಮಾಡುವಲ್ಲಿ ಉಭಯವಳಿದು ಮಾಡಬಲ್ಲಡೆ***

***ಮಾರಯ್ಯ ಪ್ರಿಯ ಅಮರೇಶ್ವರ ಲಿಂಗದ ಕೂಡುವಕೂಟ''***[5]

ಅವರವರು ಮಾಡುವ ಕಾಯಕದಲ್ಲಿ ಒಳಿತನ್ನು ಕಂಡುಕೊಳ್ಳುವ ಆತ್ಮಾನಂದವನ್ನು ಪಡೆಯುವ ಈಶ ಶಕ್ತಿಯಾಗಬೇಕು ಮಾಟವಿಲ್ಲದವನ, ದುಡಿಮೆ ಮಾಡದವನು ಕೃತಕ ಭಕ್ತಿ ಹಾಳೂರಿನ ಕುಲಗಳಿಗೆ ಕೋಲ

---

[4] ಗುಮ್ಮಳಾಪುರದ ಸಿದ್ದಲಿಂಗದೇವರ ಶೂನ್ಯಸಂಪಾದನೆ ಸಂ.ಆರ್.ಸಿ.ಹಿರೇಮಠ ವಚನ 865, ಪು.351

[5] ಅದೇ, ವಚನ 867, ಪು. 351

ಕುಡಿದಂತೆ ವ್ಯರ್ಥವಾಗುತ್ತದೆ. ಮಾಡುವ ಕಾಯಕಕ್ಕೆ ಮನ ಶುದ್ಧಿ ಎಷ್ಟು ಅಗತ್ಯವೆಂಬ ಸತ್ಯವನ್ನು ಶಿವಶರಣರಿಗೆಲ್ಲ ಅರಿವಾಗುವಂತೆ ಆಯ್ದಕ್ಕಿ ಲಕ್ಕಮ್ಮ ವಚನ ಕಟ್ಟಿ ಹೇಳಿದ್ದಾಳೆ.

ಕಾಯಕ ಕಡ್ಡಾಯತೆ ಒಬ್ಬಿಬ್ಬರಿಗಲ್ಲ. ಎಲ್ಲರಿಗೂ ಗುರುವಾಗಲಿ, ಜಂಗಮವಾಗಲಿ ಕಾಯಕವನ್ನು ಮಾಡಿಯೇ ಉಣತಕ್ಕದ್ದು ಒಂದು ಊರಿನಲ್ಲಿ ಸ್ಥಿರವಾಗಿ ನಿಂತು ಅಲ್ಲಿಯ ಜನರಲ್ಲಿರುವ ಲೋಪದೋಷಗಳನ್ನು ಬೋಧೆ, ದೀಕ್ಷೆ, ಅನುಗ್ರಹದ ಮೂಲಕ ತಿದ್ದಿ ಸುಧಾರಿಸುವ ಕಾಯಕ ಗುರುವಿಗೆ; ಊರಿಂದೂರಿಗೆ ಸಂಚರಿಸುತ್ತಾ ಸದಾ ಧರ್ಮ ಭೋಧ ಮಾಡುವ ಕಾಯಕ ಜಂಗಮನಿಗೆ. ಕೆಲವರು ನವಯುಗದಲ್ಲಿ ಧರ್ಮ ಬೋಧೆ ಮಾಡುವುದೂ ಒಂದು ಕಾಯಕವೇ ಎಂದು ಪರಿಹಾಸ್ಯ ಮಾಡುತ್ತಾರೆ. ಧರ್ಮಬೋಧ ಅರಿಯದವರು ಬೋಧಕರನ್ನು ಧರ್ಮಪ್ರಸಾರದ ಸೋಗಿನಲ್ಲಿ ಹಣ ಸಂಗ್ರಹಿಸುವ ತಿರುಕರು ಎಂದು ಭಾವಿಸುವರು. ಆದರೆ ಒಂದು ಮಾತನ್ನು ನೆನಪಿನಲ್ಲಿಡಬೇಕು. ಕ್ರಿಶ್ಚಿಯನ್ ಧರ್ಮದಲ್ಲಿ ಸಮಾಜದಲ್ಲಿ ಧರ್ಮ ಪ್ರಸಾರದ ಬಗ್ಗೆ, ಆವೃತ್ತಿಯ ಬಗ್ಗೆ ಪೂಜ್ಯಭಾವವಿರುವುದರಿಂದಲೇ ಆ ಸಮಾಜ ಸುಸಂಘಟಿತವಾಗಿದೆ ಶರವೇಗದಲ್ಲಿ ಬೆಳೆಯುತ್ತಿವೆ.

***"ಕಾಯವಳಿದ ಠಾವಿನಲ್ಲಿ ಜೀವದ ಎಡೆಯಾಟ ಉಂಟೆ?***
***ಭಾವವಿಲ್ಲದ ಭಕ್ತಿ ಹೋಯಿತ್ತು***
***ಮಾರಯ್ಯಪ್ರಿಯ ಅಮರೇಶ್ವರಲಿಂಗಸಮುಟ್ಟದೆ"***[6]

ಕಾಯಕವನ್ನು ಮಾಡಲಿಚ್ಚಿಸುವವರಿಗೆ ಮನಶುದ್ಧಿ ಇರಬೇಕಂತೆ, ಆದರೆ ದ್ರವ್ಯದ ಬಡತನ ಬಂದರೂ ಚಿತ್ತಶುದ್ಧ ಕ್ರಮದಲ್ಲಿ ಭಕ್ತಿ ಶ್ರದ್ಧೆಗಳಿಂದ ಶ್ರಮಪಟ್ಟು ದುಡಿದರೆ ಸದ್‌ಭಕ್ತಿಯುಳ್ಳವನಿಗೆ ಲಕ್ಷ್ಮಿ ತಾನಾಗಿಯೇ ಒಲಿಯುತ್ತಾಳೆ. ಆ ಸಂಪಾದನೆ ಸೇವೆ ಮಾಡಲು ಸಹಕಾರಿಯಾಗಬೇಕು. ಆಯ್ದಕ್ಕಿ ಲಕ್ಕಮ್ಮನ ವಚನಗಳು ಬುದ್ಧಿಗೆ ನಿಲುಕುವ ಸತ್ಯವನ್ನು ವಿಸ್ತರಿಸುವ ಸಮಾಜವನ್ನು ತಿದ್ದುವ ರೀತಿಯಲ್ಲಿ ಅಭಿವ್ಯಕ್ತಗೊಂಡಿವೆ.

ಕಾಯ–ದೇಹ, ದೇಹ ಎಂಬುದು ಸ್ಥಾವರ ಸ್ವರೂಪಿಯಾದುದ್ದು. ಕಾಯ ನಶ್ವರವಾಗಿದ್ದ ಈ ದೇಹದೊಳಗಿನ ಪ್ರಾಣ ಇಲ್ಲವಾದ ಮೇಲೆ ಆ ಸ್ಥಳದಲ್ಲಿ ಜೀವಕ್ಕೆ ಸ್ಥಾನವಿಲ್ಲ. ಹಾಗೇಯೆ ಶುದ್ಧವಾದ ಭಾವಭಕ್ತಿ ಇಲ್ಲದ ಪೂಜೆ ಎಷ್ಟೂ ಮಾಡಿದರೂ ಪ್ರಯೋಜನವಿಲ್ಲ. ಈ ರೀತಿಯ ಭಕ್ತಿಯಿಂದ ಶಿವನನ್ನು ಅರಿಯಲು ಸಾಧ್ಯವಿಲ್ಲ. ನೈಜ ಭಕ್ತಿ, ಆಚಾರ, ಕಾಯಕ, ತ್ರಿವಿಧ ದಾಸೋಹದಿಂದ ಮಾತ್ರ ದೇಹವಿದ್ದಾಗ, ಪ್ರಾಣದಂತಿರುವ ಲಿಂಗವನ್ನು ಅರಿತು ಭಕ್ತಿಯಿಂದ ಆಚರಿಸುವುದು ಶರಣರ ಲಕ್ಷಣ. ಈ ರೀತಿಯ ಅರಿವಿನೆಡೆಗೆ ಸಾಗುವ ಮೂಲಕ ಮಾರಯ್ಯ ಪ್ರಿಯ ಅಮರೇಶ್ವರ ಲಿಂಗವನ್ನು ಕಾಣಬಹುದು. ಇಲ್ಲಿ ಲಕ್ಕಮ್ಮನ ಅಧ್ಯಾತ್ಮ ನಿಲುವು ವಿಶಿಷ್ಟವಾಗಿದೆ. ಸ್ಥಾವರಕ್ಕೆ ಪ್ರಾಧ್ಯಾನತೆ ಕೊಡದೆ ಜಂಗಮ ಸ್ವರೂಪಿಯಾದ ಆತ್ಮಕ್ಕೆ ಪ್ರಾಮುಖ್ಯತೆ ಅಭೂತಪೂರ್ವವಾಗಿ ಮೂಡಿ ಬಂದಿದೆ.

***"ಅಂಗಕ್ಕೆ ಬಡತನವಲ್ಲದೆ ಮನಕ್ಕೆ ಬಡತನವುಂಟೆ?***
***ಬೆಟ್ಟ ಬಲ್ಲಿತ್ತೆಂದಡೆ, ಉಳಿಯ ಮೊನೆಯಲ್ಲಿ ಬಡತನವಿದ್ದಡೆ ಒಡೆಯದೆ?***

---
[6] ಲಿಂಗಾಯಿತ ಧರ್ಮ ಕೈಪಿಡಿ, ಪು.84

***ಘನ ಶಿವಭಕ್ತರಿಗೆ ಬಡತನವಿಲ್ಲ; ಸತ್ಯರಿಗೆ ದುಷ್ಕರ್ಮವಿಲ್ಲ***
***ಎನಗೆ ಮಾರಯ್ಯಪ್ರಿಯ ಅಮರೇಶ್ವರಲಿಂಗವುಳ್ಳನ್ನಕ್ಕ***
***ಆರ ಹಂಗಿಲ್ಲ ಮಾರಯ್ಯ"***[7]

ಶರಣ ಸಿದ್ಧಾಂತ ಬಲು ದೊಡ್ಡದು ಬಹಿರಂಗದ ಆಡಂಬರಕ್ಕೆ ಅವರೆಂದು ಮಹತ್ವ ಕೊಟ್ಟಿಲ್ಲ. ಅಂಗಕ್ಕೆ ಬಡತನವಿದ್ದರೂ ಮನಸ್ಸಿಗೆ ಬಡತನವಿಲ್ಲ. ತೋರಿಕೆಯ ವೇಷಭೂಷಣವನ್ನು ಅಲ್ಲಗಳೆಯುವ ಶರಣೆಯರು ಮನಶುದ್ಧಿಯನ್ನು ಹೆಚ್ಚು ಪ್ರೀತಿಸಿದ್ದಾರೆ. ಅದನ್ನೆ ಲಕ್ಕಮ್ಮ ಈ ವಚನದಲ್ಲಿ ಹೇಳಿಬಿಟ್ಟಿದ್ದಾಳೆ. ಬೆಟ್ಟ ದೊಡ್ಡದು ಮತ್ತು ಗಟ್ಟಿಮುಟ್ಟಾದುದು. ಆದರೆ ಉಳಿ ತೀರ ಸಣ್ಣದುದಾಗಿದ್ದರೂ ಅದು ಬೆಟ್ಟವನ್ನು ಭೇದಿಸಬಲ್ಲದು. ಹಾಗೂ ತುಂಡರಿಸಬಲ್ಲದು. ಹಾಗೇ ಮಹಾಘನ ಶಿವಭಕ್ತರ ಅಂಗಕ್ಕೆ ಬಡತನವಿರಬಹುದು. ಆದರೆ ಅವರೊಳಗಿರುವ ಪರಿಶುದ್ಧವಾದ ಭಕ್ತಿಗೆ ಬಡತನವಿಲ್ಲ. ನಿಜವಾದ ಭಕ್ತರಿಗೆ ಯಾವುದೂ ಕಠಿಣವಾದುದಲ್ಲ. ಲಿಂಗ ತನುವಿಗೆ, ಭಕ್ತಂಗೆ ಬಡತನವಷ್ಟೇ ಅಲ್ಲ ಯಾರ ಹಂಗೂ ಕಾಡುವುದಿಲ್ಲ. ಅವರ ಮನದ ಶ್ರೀಮಂತಿಕೆ ಬೇರೆಯವರಿಗೆ ಬರುವುದಿಲ್ಲವೆಂದಿದ್ದಾರೆ ಲಕ್ಕಮ್ಮ. ಲಕ್ಕಮ್ಮ ಕಾಯಕದ ಹಿನ್ನೆಲೆಯಲ್ಲಿ ತನ್ನ ಪತಿಯನ್ನು ಎಚ್ಚರಿಸುವ ಆಕೆ ಗಂಡನನ್ನು ಎಚ್ಚರಿಸುವ ಪರಿ ಸುಲಭ ಸೊಬಗನ್ನೀಯುತ್ತದೆ.

***"ಅವಾರಿಯೆಂದು ಮಾಡುವಲ್ಲಿ ಅವರಿವರೆಂದು ಪ್ರಮಾಣಿಸಲುಂಟೆ?***
***ಸಮಯಕ್ಕೆ ಹೋಗಿ ಸಮಯವನರಿಯರೆಂದು ಭವಗೆತಲುಂಟೆ?***
***ಮಾರಯ್ಯ ಪ್ರಿಯ ಅಮರೇಶ್ವರಲಿಂಗವ ಹೊಂದುವ ಭಾವ"***[8]

ಸಮಾಜದಲ್ಲಿ ಅದರ ಘಟಕಗಳಾದ ಒಬ್ಬೊಬ್ಬ ವ್ಯಕ್ತಿಯ ಉದಯವು ಆಗಬೇಕಾದುದು ಅವಶ್ಯಕ ವ್ಯಕ್ತಿಗಳು ದೊಡ್ಡವರಾದರೆ ಸಮಾಜ ದೊಡ್ಡದಾಗುತ್ತದೆ. ಪ್ರತಿಯೊಬ್ಬ ವ್ಯಕ್ತಿಯು ಸಮಾಜದ ಹಿತವನ್ನು ತನ್ನ ಸಾಧನೆಯ ಮಾರ್ಗಕ್ಕೆ ಬಳಸಿಕೊಂಡು ತನ್ನ ವಿಕಾಸವನ್ನು ಸಾಧಿಸಿಕೊಳ್ಳಬೇಕು. ಅಂತರಂಗದ ವಿಕಾಸ ಪ್ರತಿಯೊಬ್ಬನ ಆಜನ್ಮ ಸಿದ್ದವಾದ ಕರ್ತವ್ಯ ಅದನ್ನು ಸಾಧಿಸಿದಾಗಲೇ ಮನುಷ್ಯತ್ವ ಸಾರ್ಥಕವಾಗಬೇಕು ಎಂದು ಶರಣರು ಆಶಿಸಿದರು ಮತ್ತು ಎಲ್ಲರೂ ಸಾಧಕರಾಗಬಹುದಾದಂತಹ ವ್ಯಾಪಕವಾದ ಮಾರ್ಗವನ್ನು ಮನೆಮನೆಗೆ ಕೊಂಡೊಯ್ದರು.

ಮನೆಗೆ ಅತಿಥಿಗಳು ಬಂದಾಗ ಇವರು ದೊಡ್ಡವರು, ಶ್ರೀಮಂತರು, ಮೇಲುವರ್ಣ, ವರ್ಗದವರು, ಇವರು ಸಣ್ಣವರು, ಬಡವರು, ಕೀಳುಕುಲದವರು ಎಂದು ಮುಂತಾಗಿ ತಾರತಮ್ಯವನ್ನೆಸಗದೆ ಅದನ್ನು ಒರೆಗೆಹಚ್ಚಿ ನೋಡದೆ ಉಪಚರಿಸಬೇಕು. ಶಿವಶರಣ ಸಮೂಹವಿದ್ದಲ್ಲಿ ಹೋಗಿ ಚಿಂತನ ಮಂಥನ ಮಾಡಿ ಶರಣರ ಬಗ್ಗೆ ಅನುಭಾವಗೋಷ್ಠಿಯ ಬಗ್ಗೆ ಸರಿಯಾಗಿ ತಿಳಿದಿಲ್ಲ ಎಂದೇನಾದರೂ ಇರಲಾದೀತೆ? ಅನುಭಾವಿಯಾದರೆ ಪ್ರತಿಯೊಬ್ಬರ ಭಾವವನ್ನು ಅರ್ಥಮಾಡಿಕೊಳ್ಳುವಲ್ಲಿ ಶುಚಿಯಾಗಿರಬೇಕಾಗುತ್ತದೆ. ಅಂದಾಗ ಲಿಂಗಾಂಗ ಸಾಮರಸ್ಯದ ಅರಿವನ್ನು ಅನುಭವವನ್ನು ಸಂಪಾದಿಸಿಕೊಳ್ಳಲು ಸಾಧ್ಯವಾಗುತ್ತದೆ.

---

[7] ಗು. ಸಿದ್ದಲಿಂಗದೇವರ ಶೂನ್ಯಸಂಪಾದನೆ ಸಂ.ಆರ್.ಸಿ.ಹಿರೇಮಠ ವಚನ 857, ಪು.349

[8] ಅದೇ ವಚನ 852, ಪು.349

**"ಆವ ಬೀಜವು ಬೀಳುವಲ್ಲಿ ಮೊಳೆ ಮುಖ ಹಿಂಚು ಮುಂಚುಂಟೆ?**
**ನೀ ಮರೆದಲ್ಲಿ ನಾನರಿದಲ್ಲಿ ಬೇರೊಂದೊಡಲುಂಟೆ?**
**ಮೂಲ ನಷ್ಟವಾದಲ್ಲಿ ಅಂಕುರ ನಿಂದಿತ್ತು**
**ಕೂಟಕ್ಕೆ ಸತಿಪತಿ ಎಂಬ ನಾಮವಲ್ಲದೆ**
**ಅರಿವಿಂಗೆ ಬೇರೊಂದೊಡಲುಂಟೆ?**
**ಬೇರೊಂದಡಿಯಿಡದಿರು**
**ಮಾರಯ್ಯಪ್ರಿಯ ಅಮರೇಶ್ವರಲಿಂಗವನರಿಹಬಲ್ಲಡೆ"**[9]

ಶರಣಮಾರ್ಗ ಎಲ್ಲ ರೀತಿಗಳನ್ನೂ ಒಳಗೊಳ್ಳುವ ಮಾರ್ಗವಾಗಿ ಪರಿಣಮಿಸಿ ಒಬ್ಬೊಬ್ಬ ಸಾಧಕನ ಮನೋಧರ್ಮವೂ, ವ್ಯಕ್ತಿ ವಿಶಿಷ್ಟತೆಯಿಂದ ಕೂಡಿದುದು. ಆ ಎಲ್ಲ ವಿಶಿಷ್ಟತೆಗೂ ಪುರಸ್ಕಾರವಿತ್ತು, ಆ ವೈವಿಧ್ಯದಲ್ಲಿ ಏಕಸೂತ್ರವನ್ನು ಸಾಧಿಸುವ ಮಾರ್ಗ ಶರಣ ಮಾರ್ಗ. ಈ ಮಾರ್ಗದಲ್ಲಿ ನಿಂತು ಸ್ತ್ರೀ–ಪುರುಷರೆನ್ನದೆ ಅವರವರ ಮನೋಧರ್ಮಕ್ಕೆ ಅನುಗುಣವಾಗಿ ಮಾರ್ಗವನ್ನು ರೂಪಿಸುವ ಶಕ್ತಿಯನ್ನು ಪಡೆದಿರುವುದೇ ಶರಣರ ಅನುಭಾವ ಮಾರ್ಗದ ಇನ್ನೊಂದು ವೈಶಿಷ್ಟ್ಯ.

ಆಧ್ಯಾತ್ಮ ಸಾಧನೆಗೆ ಸ್ತ್ರೀ ಪುರುಷರೆಂಬ ಭೇದವಿಲ್ಲವೆಂಬ ಮಾತನ್ನು ಶರಣರು ಸಾರಿದರು, ಸಾಧಿಸಿ ತೋರಿಸಿದರು. ಯಾವ ಬೀಜವೇ ಆಗಲಿ ಭೂಮಿಯಲ್ಲಿ ಬಿದ್ದು ಮಣ್ಣಿನಲ್ಲಿ ಸೇರಿ ನೀರು ಗೊಬ್ಬರವನ್ನುಂಡು ಮೊಳಕೆಯೊಡೆದಾಗ ಅದಕ್ಕೆ ಹಿಂದೆ, ಮುಂದೆ ಎಂದು ಹೇಳಲಾದೀತೆ? ಗಂಡ ಮರೆತು ಹೆಂಡತಿ ಅರಿತಾಗ, ಹೆಂಡತಿ ಮರೆತು ಗಂಡ ಅರಿತಾಗ ಅದಕ್ಕೆ ಬೇರೆ ಒಡಲು ಇರುವುದಿಲ್ಲ ಮನುಷ್ಯನಿಗೆ ಅರುಹು ಮರಹು ಸಹಜವಾದವುಗಳೇ. ಸೃಷ್ಟಿಯಾಗುವಾಗ ಯಾವುದೇ ಜೀವ ತನ್ನ ಮೂಲವನ್ನು ಕಳೆದುಕೊಂಡು ಅಂಕುರಿಸುತ್ತದೆಯೇ ಸಮರಸಕ್ಕೆ ಸತಿಪತಿಯೆಂಬ ನಾಮವಿರುತ್ತದೆಯೇ ಹೊರತು ಅರಿವಿಗೆ ಬೇರೊಂದು ಒಡಲೆಂದು ಇರುವುದಿಲ್ಲ ಲಿಂಗವನ್ನು ಅರಿಯಬೇಕಾದರೆ ಶಿವಸತ್ಪಥವಲ್ಲದೆ ಬೇರೆ ದುರ್ಮಾರ್ಗ ಅಡಿಯಿಡಬಾರದು ಎಂದೂ ಲಕ್ಕಮ್ಮ ಪರಿಪರಿಯಾಗಿ ಹೇಳಿದ್ದಾಳೆ .

**"*ಅಂಧಕಂಗೆ ಜೀವವಿದ್ದಡೆ***
***ಕಣ್ಣಿದ್ದಂತೆ ಕಂಡು ನಡೆಯಬಲ್ಲನೆ?***
***ನೀ ಸತಿಯಾಗಿ ನಾ ಪತಿಯಾಗಿ***
***ಉಭಯ ಪ್ರಾಣ ಏಕರೂಪವಾಗಿ***
***ಎನ್ನಂಗದ ಅಂಗನೆ ಅಮರೇಶ್ವರಲಿಂಗವ ತೋರಾ"***[10]

ಪರಸ್ಪರ ವಿಚಾರಮಥನದಿಂದ, ವಿಚಾರ ವಿನಿಮಯದಿಂದ ಸಾಧಕನ ಮಾರ್ಗ ಕ್ರಮೇಣ ವಿಕಾಸಗೊಳ್ಳುತ್ತಾ ಹೋಗಬೇಕು ಎಂದು ನಂಬಿದವರು ಶರಣರು. ಎಂದೋ ಒಂದು ದಿನ ಶಿವ ಕನಸಿನಲ್ಲಿ ಬಂದು ಉದ್ಧರಿಸುತ್ತಾನೆಂದು ನಂಬಿದವರಲ್ಲ, ವ್ಯಕ್ತಿ ತನ್ನನ್ನು ತಾನೇ ಉದ್ಧರಿಸಿಕೊಳ್ಳಬೇಕು. ಅದಕ್ಕೆ ಬೇಕಾದ

[9] ಗು. ಸಿದ್ದಲಿಂಗದೇವರ ಶೂನ್ಯಸಂಪಾದನೆ ಸಂ.ಆರ್.ಸಿ.ಹಿರೇಮಠ ವಚನ 869, ಪು.349
[10] ಅದೇ ವಚನ 840, ಪು.344

ಅವಕಾಶಗಳನ್ನು ಸನ್ನಿವೇಶಗಳನ್ನೂ, ಕಲ್ಪಿಸಿಕೊಳ್ಳಬೇಕು. ಆ ಮಾರ್ಗದಲ್ಲಿ ನಡೆದ ಅನುಭಾವಿಗಳ ಒಡನಾಡಬೇಕು ಎಂಬುದಕ್ಕೆ ಹೆಚ್ಚು ಮಹತ್ವವನ್ನು ಕೊಟ್ಟರು ಅನೇಕ ವೇಳೆ 'ಅನುಭಾವ' ಎಂಬ ಮಾತನ್ನು 'ಅನುಭಾವಿ'ಗಳೊಡನೆ ನಡೆಯುವ ವಿಚಾರ ಮಂಥನ ಎಂಬ ಅರ್ಥದಲ್ಲಿಯೇ ಉಪಯೋಗಿಸಿರುವುದು ಕಂಡುಬರುತ್ತದೆ.

ಶರಣರಲ್ಲಿ ಮೇಲು ಕೀಳು ಎಂಬ ಭಾವನೆ ಎಂದೂ ಅವರ ಮನದಲ್ಲಿ ಸುಳಿಯಲಿಲ್ಲ. ವಿಚಾರದ ಅರಿವಿಗಾಗಿ ತಾನು ಮೇಲು, ನೀನು ಕೀಳು ಎಂದೂ ಬಗೆದವರಲ್ಲ. ಜ್ಞಾನ ವಿಸ್ತಾರ ವ್ಯಾಪ್ತಿಗೆ ಯಾರು ಸೀಮಿತವಾಗದೆ ತನಗರಿವಿದ್ದ ಜ್ಞಾನದ ಅರಿವನ್ನು ಇತರ ಶರಣರಿಗೆ ಹಂಚಿದವರು ಶರಣ ಆಯ್ದಕ್ಕಿ ಮಾರಯ್ಯ ಕುರುಡನಾದವರಿಗೆ ಜೀವವಿದ್ದರೂ ಸಹ ಕಣ್ಣು ಕಾಣುತ್ತದೆ ಎಂದು ನಡೆಯಲು ಹೋದರೆ ಅಪಾಯ ಕಟ್ಟಿಟ್ಟ ಬುತ್ತಿ. ಆದರೆ ಕಣ್ಣಿದ್ದು ಎಡವುದು ಇದೆಯಲ್ಲ ಅದು ವಿಪರ್ಯಾಸದ ಸಂಗತಿ.

ನಾನು ಗೊತ್ತಿಲ್ಲದೆ ಎಡವಿದ್ದೆ ಆದರೆ ನೀ ಸತಿಯಾಗಿ ನನ್ನ ಕೈಹಿಡಿದು ಎಚ್ಚರಿಸಿ ನನ್ನನ್ನು ಅರಿತು ಇಬ್ಬರು ಉಭಯ ಪ್ರಾಣ ಏಕರೂಪವಾಗಿ ನಮ್ಮ ಕುಲದೈವ ಅಥವಾ ಆರಾಧ್ಯದೈವ ಅಮರೇಶ್ವರ ಲಿಂಗವನ್ನು ನೀ ತೋರಬೇಕು ಎಂಬುದು ಆಯ್ದಕ್ಕಿ ಮಾರಯ್ಯನ ಕಳಕಳಿ. ಹೀಗೆ ಲಕ್ಕಮ್ಮನ ಬಳಿ ತನ್ನ ಬಯಕೆಯೆಂಬ ಕೋರಿಕೆಯನ್ನು ಮನ್ನಿಸುವಂತೆ ಮತ್ತು ತನ್ನ ತಪ್ಪು ಅರಿವಿಗೆ ಬರದಿದ್ದ ಪಕ್ಷದಲ್ಲಿ ಅದನ್ನು ಇಂದೂ ಮುಂದೂ ಯೋಚಿಸದೆ ನೇರವಾಗಿ ಪ್ರಸ್ತುತಪಡಿಸು ಎಂದು ತನ್ನ ಸತಿ ಲಕ್ಕಮ್ಮನಿಗೆ ಹೇಳುವ ಪರಿಯಾಗಿದೆ.

ಆಯ್ದಕ್ಕಿ ಮಾರಯ್ಯನ ಒಂದು ವಚನವು ಈ ರೀತಿಯ ಸತಿ–ಪತಿ ಸಾಮರಸ್ಯ ಕುರಿತು ತೋರ್ಪಡಿಸುವಂತಿದೆ. ಶರಣರಲ್ಲಿ ಮುಖ್ಯವಾಗಿ ಸತಿ–ಪತಿಗಳ ಸಾಮರಸ್ಯದಲ್ಲಿ ಮೇಲು, ಕೀಳು ಎಂಬ ಭಾವನೆ ಅವರ ಮನದಲ್ಲಿ ಮೂಡಿರಲಿಲ್ಲ. ಗಂಡು–ಹೆಣ್ಣಿಗೆ, ಹೆಣ್ಣು–ಗಂಡಿಗೆ ಆಧ್ಯಾತ್ಮ ಪಥವನ್ನರಿಯಲು ಒಬ್ಬರಿಗೊಬ್ಬರಿಗೆ ಸಹಾಯಕರಾಗಿದ್ದರು. ಶಿವತತ್ತ್ವ ಅರಿಯುವ ವಿಚಾರಕ್ಕೆ ಬಂದಾಗ 'ನೀ ಶ್ರೇಷ್ಠ ನಾ ಕನಿಷ್ಠ' ಎಂಬ ವ್ಯಾಕುಲದಿಂದ ಅರಿಯಲು ಸಂಸಾರವನ್ನು ತೊರೆಯದೆ ಸಂಸಾರದಲ್ಲಿ ಆಧ್ಯಾತ್ಮಪಥವನ್ನು ಅರಿತ ಸರ್ವ ಶ್ರೇಷ್ಠರು. ಶಿವಶರಣರಲ್ಲಿ ಆಧ್ಯಾತ್ಮದ ಪರಿಕಲ್ಪನೆ ವೈವಿಧ್ಯಪೂರ್ಣವಾಗಿದೆ. 'ಕಾಯವೇ ಕೈಲಾಸ', ಕಾಯಕವೇ ಕೈಲಾಸ ಎಂಬ ಮನೋಧರ್ಮ ಹೊಂದಿದ್ದ ಶರಣರು ಶಿವನನ್ನು ಪರಿಪರಿಯಾಗಿ ಅರಿಯಲು ನಾನಾ ರೀತಿ ಭಕ್ತಿ ಅಭಿವ್ಯಕ್ತಿಯನ್ನು ತೋರಿದ್ದಾರೆ. ಆಯ್ದುಕ್ಕಿ ಮಾರಯ್ಯನ ಭಕ್ತಿ ಬಸವಣ್ಣನ ಭಕ್ತಿಗೆ ಹೋಲಿಕೆ ಮಾಡಬಹುದು.

***"ಸಮಯಕ್ಕೆ ಬಂದವನೆಂದು ಕಂದದೆ, ಬಾರೆನೆಂದು ಕುಂದದೆ***
***ಈ ಉಭಯದ ಸಂದನಳಿದು ನಿಂದಲ್ಲಿ***
***ಅಮರೇಶ್ವರಲಿಂಗವುತಾನೆ***
***ಸ್ಥಾವರಕ್ಕೆ ಅಳಿವುಂಟು ಜಂಗಮಕ್ಕೆ ಅಳಿವಿಲ್ಲ"***[11]

ಎಂಬಂತೆ ಆಯ್ದುಕ್ಕಿ ಮಾರಯ್ಯನ ದೃಷ್ಟಿಯಲ್ಲಿ ದೈವದ ಪರಿಕಲ್ಪನೆ ಮೂರ್ತಿ ರೂಪದಲ್ಲ ಅಮೂರ್ತ ರೂಪದ್ದಾಗಿದೆ, ಜ್ಞಾನದ ಪರಿಮಿತಿಯನ್ನು ಅರಿಯಲು ಅಂದರೆ ಅಂತರಂಗದ ಜ್ಞಾನವನ್ನು ಅರಿಯಲು ತಾವು

[11] ಸಂಕೀರ್ಣ ವಚನ ಸಂಪುಟ, ಆಯ್ದುಕ್ಕಿ ಮಾರಯ್ಯ, ವಚನ 29, ಪು. 374.

ನಿಂದಲ್ಲೆ ಲಿಂಗವನ್ನು ಪೂಜಿಸುವ ಮೂಲಕ ಅಂತರಂಗದ ಕದವನ್ನು ತಟ್ಟ ಬಹುದಾಗಿದೆ ಎಂದು ಮಾರಯ್ಯನ ಅಭಿಮತವಾಗಿದೆ. ಇಲ್ಲಿ ಒಂದು ರೀತಿ ಬೋಧನೆ ಪ್ರಕ್ರಿಯೆಗೆ ಒಳಗಾಗುವುದು ಕಾಣಸಿಗುತ್ತದೆ.

ಶರಣರು ಕೇವಲ ತತ್ತ್ವ, ಜಿಜ್ಞಾಸೆಗಳಿಗಿಂತ ಧಾರ್ಮಿಕ ವಿಚಾರಗಳಿಗೆ, ನೈತಿಕ ಆಚರಣೆಗಳಿಗೆ ತತ್ತ್ವಾನುಭವಕ್ಕೆ ಹೆಚ್ಚು ಮಹತ್ವವನ್ನು ಕೊಟ್ಟವರಾದರೂ ಸೃಷ್ಟಿಕರ್ತನ ಸ್ವರೂಪ, ಜೀವ–ಶಿವರ ಸಂಬಂಧ ಈ ಮೊದಲಾದ ವಿಚಾರಗಳಲ್ಲಿ ತಮ್ಮ ಸ್ಪಷ್ಟವಾದ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. 'ಈ ಸೃಷ್ಟಿ ಮಿಥ್ಯ' ಎಂಬ ವಾದವನ್ನು ಶರಣರು ಒಪ್ಪುವುದಿಲ್ಲ. ನಮ್ಮ ಬಾಹ್ಯ ಇಂದ್ರಿಯಗಳಿಗೆ ಕಾಣುವ ಸ್ವರೂಪದಲ್ಲಿಯೇ ಜಗತ್ತು ಸತ್ಯವಲ್ಲದಿರಬಹುದು. ಆದರೆ ಮೋಲದ ಕೋಡಿನಂತೆ ಸಂಪೂರ್ಣ ಮಿಥ್ಯವಲ್ಲ ಎಂದು ತಮಿಳು ಶೈವಸಿದ್ಧಾಂತ ಹೇಳಿದ ಮಾತು ವೀರಶೈವಕ್ಕೂ ಸಮ್ಮತವಿದೆ.

***"ವಿಶ್ವಮಯರೂಪಾಗಿ ಒಂದೆಯಯ್ಯ ಭಕ್ತಿಗೆ***
***ಎನ್ನ ಮನಕ್ಕೆ ಭಿನ್ನವಿಲ್ಲದೆ ಸಲೆ ಸಂದ ನಿಲವು***
***ಅಮರೇಶ್ವರ ಲಿಂಗಕ್ಕೆ ಕೂಟವಾಯಿತು"***[12]

ಶರಣರಲ್ಲಿ ಆಯ್ದಕ್ಕಿ ಮಾರಯ್ಯನ ಸೃಷ್ಟಿಯಲ್ಲಿಯೇ ಪರಮಾತ್ಮನು ವಿರಾಟ್ ಸ್ವರೂಪನಾಗಿ ಗೋಚರಿಸಲ್ಲನೆಂಬುದನ್ನು ತೋರಿಸಿದ್ದಾನೆ. ಸೃಷ್ಟಿಕರ್ತನ ಮುಖಗಳು ಹಲವಾರು. ಶರಣನಾದವನು ಸರ್ವಭರಿತನಾದ ಆತನನ್ನು ಕಾಣಲು ಶಕ್ತನಾಗಬೇಕು. ಆತನ ರೂಪ ಎಲ್ಲೆಯನ್ನು ಮೀರಿದಾ ಶುದ್ಧ ನಿರಂಜನ ಪಂಜ್ಯೋತಿಸ್ವರೂಪನಾಗಿಯೂ ಇರಬಲ್ಲನೆಂಬುದನ್ನು ಮರೆಯದಿರಬೇಕು. ಕಾಯಕತತ್ವವನ್ನು ತಮ್ಮ ಅಂತರಂಗದಲ್ಲಿ ಲೀನವಾಗಿಸಿ ಕೊಂಡು ತಮ್ಮ ಆರಾಧ್ಯ ದೈವ ಅಮರೇಶ್ವರಲಿಂಗವಾಗಿ ನೀ ಸತಿಯಾಗಿ ನಾಪತಿಯಾಗಿ, ಉಭಯ ಪ್ರಾಣ ಏಕರೂಪವಾಗಿ ಎನ್ನಂಗದ ಅಂಗನೆ ಅಮರೇಶ್ವರ ಲಿಂಗವ ತೋರಾ ಎಂಬ ರೀತಿ ಕಾಯಕ, ಆಧ್ಯಾತ್ಮದಲ್ಲಿ ಲೀನರಾಗಿದ್ದರು. ಸತಿ–ಪತಿಗಳೊಂದಾದ ಭಕ್ತಿ–ದಾಸೋಹ–ಕಾಯಕದ ಪರಿಯನ್ನು ಈ ದಂಪತಿಗಳನ್ನು ನೋಡಿ ಆಧುನಿಕ ಸಮಾಜದ ಜನ ಸಮುದಾಯ ಕಲಿಯಬೇಕು. ಕಾಯಕ ಮತ್ತು ಆಧ್ಯಾತ್ಮಿಕ ಪರಿಕಲ್ಪನೆ ಪ್ರಸ್ತುತ ಸಮಾಜದಲ್ಲಿ ಮಾರಯ್ಯ ಮತ್ತು ಲಕ್ಕಮ್ಮನಂತೆ ಅಳವಡಿಸಿಕೊಳ್ಳುವುದು ಅಗತ್ಯ.

**ಪರಾಮರ್ಶನ ಗ್ರಂಥಗಳು**


- ಕಲಬುರ್ಗಿ ಎಂ.ಎಂ. (1993). ಸಂಕೀರ್ಣ ವಚನ ಸಂಪುಟ–1, ಕನ್ನಡ ಸಂಸ್ಕೃತಿ ಇಲಾಖೆ, ಕರ್ನಾಟಕ ಸರ್ಕಾರ, ಬೆಂಗಳೂರು.
- ಮಾತೇ ಮಾದೇವಿ. ಲಿಂಗಾಯತ ಧರ್ಮ ಕೈಪಿಡಿ, ಸುಯಿಧಾನ ಸುಗಂದ ಮಾಲೆ, ಜಗನ್ಮಾತಾ ಅಕ್ಕಾಮಹಾದೇವಿ ಆಶ್ರಮ, ಉಳವಿ ರಸ್ತೆ, ಧಾರವಾಡ.
- ಹಿರೇಮಠ ಆರ್.ಸಿ.(ಸಂ.) ಶೂನ್ಯಸಂಪಾದನೆ. ಗುಮ್ಮಳಾಪುರದ ಸಿದ್ದಲಿಂಗದೇವರು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.


[12] ಸಂಕೀರ್ಣ ವಚನ ಸಂಪುಟ, ಆಯ್ದಕ್ಕಿ ಮಾರಯ್ಯ, ವಚನ 26, ಪು. 373.